ಪತ್ರಿಕಾ ಪ್ರಕಟಣೆ

# ಕಿರಾಣಿ ಮತ್ತು ರಿಟೇಲರ್‌ಗಳಿಗೆ ನೆರವಾಗಲು ಹೊಸ ಸಾಲ ಯೋಜನೆ ಆರಂಭಿಸಿದ ಫ್ಲಿಪ್‌ಕಾರ್ಟ್ ಹೋಲ್‌ಸೇಲ್

- **ಸಾಲ ನೀಡುವ ಮತ್ತು ಹಣಕಾಸು ತಂತ್ರಜ್ಞಾನ ಸಂಸ್ಥೆಗಳ ಜೊತೆಗಿನ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಪಾಲುದಾರಿಕೆ ಮೂಲಕ 15 ಲಕ್ಷಕ್ಕೂ ಹೆಚ್ಚು ಕಿರಾಣಿ ಅಂಗಡಿ ಮಾಲೀಕರು ಮತ್ತು ರಿಟೇಲರುಗಳು ಕೇವಲ ಎರಡು ನಿಮಿಷಗಳಲ್ಲಿ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗಲಿದೆ**
- **ಈ ಹೊಸ ಸಾಲದ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಲು ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಕಿರಾಣಿ ಅಂಗಡಿಗಳಿಗೆ ಅಡೆತಡೆರಹಿತ ಡಿಜಿಟಲ್ ಸೌಲಭ್ಯ ಕಲ್ಪಿಸಲಿದೆ. ಈ ಮೂಲಕ ಕಿರಾಣಿ ವರ್ತಕರು ತಮ್ಮ ವಹಿವಾಟಿನ ದುಡಿಯುವ ಬಂಡವಾಳದ ಅಗತ್ಯಗಳನ್ನು ಸುಲಭವಾಗಿ ನಿರ್ವಹಿಸಲು ಅನುವು ಮಾಡಿಕೊಡಲಿದೆ**
- **ಕಿರಾಣಿ ವರ್ತಕರು ತಮ್ಮ ಕ್ರೆಡಿಟ್ ಬ್ಯಾಲನ್ಸ್ ಮೇಲೆ ನಿರಂತರವಾಗಿ ನಿಗಾ ಇರಿಸಲು ಮತ್ತು ಅನುಕೂಲಕರ ಮರುಪಾವತಿ ಮತ್ತು ಖರೀದಿಗೆ ತಕ್ಷಣಕ್ಕೆ ಮರುಪಾವತಿ ಸೌಲಭ್ಯಗಳನ್ನು ಬಳಸಿಕೊಳ್ಳಬಹುದು**

**ಬೆಂಗಳೂರು, ಆಗಸ್ಟ್ 24, 2021:** ಭಾರತದಲ್ಲಿ ಗಮನಾರ್ಹವಾಗಿ ಬೆಳವಣಿಗೆ ಕಂಡಿರುವ ದೇಶಿ ಸಂಸ್ಥೆ ಫ್ಲಿಪ್‌ಕಾರ್ಟ್ ಗ್ರೂಪ್‌ನ ಬಿ2ಬಿ ಸಗಟು ಮಾರುಕಟ್ಟೆಯ ಡಿಜಿಟಲ್ ತಾಣವಾಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್, ಕಿರಾಣಿ ಅಂಗಡಿ ಮಾಲೀಕರು ತಮ್ಮ ದುಡಿಯುವ ಬಂಡವಾಳದ ಅವಶ್ಯಕತೆಗಳನ್ನು ನಿರ್ವಹಿಸಲು ಮತ್ತು ಅವರ ವ್ಯಾಪಾರ ವಹಿವಾಟು ವೃದ್ಧಿಸಲು ಸಹಾಯ ಮಾಡುವ ಗುರಿ ಹೊಂದಿರುವ ಉದ್ಯಮದಲ್ಲಿಯೇ ಮೊದಲ ಬಾರಿಯದಾಗಿರುವ ಸುಲಭ ಸಾಲ ಸೌಲಭ್ಯದ ಕಾರ್ಯಕ್ರಮ ಆರಂಭಿಸುವುದಾಗಿ ಘೋಷಿಸಿದೆ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ಸಹಭಾಗಿತ್ವದಲ್ಲಿ ಆರಂಭಿಸಲಾಗಿರುವ ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ 'ಈಸೀ ಕ್ರೆಡಿಟ್' ಸೇರಿದಂತೆ ವಿವಿಧ ಬಗೆಯ ಸಾಲದ ಕೊಡುಗೆಗಳು, ಭಾರತದಲ್ಲಿ ಕಿರಾಣಿ ಅಂಗಡಿಗಳ ಹಲವಾರು ಅಗತ್ಯಗಳನ್ನು ಬಗೆಹರಿಸಲು ಮತ್ತು ತಂತ್ರಜ್ಞಾನ ಬಳಸಿಕೊಂಡು ಅವರ ವ್ಯಾಪಾರ – ವಹಿವಾಟು ಸುಲಭಗೊಳಿಸಿ ಸಮೃದ್ಧಿ ಹೆಚ್ಚಿಸಲು ಕೈಗೊಂಡಿರುವ ಉಪಕ್ರಮಗಳ ಭಾಗವಾಗಿವೆ.

ಈ ಹೊಸ ಕೊಡುಗೆಗಳ ಮೂಲಕ, ಕಿರಾಣಿ ಅಂಗಡಿ ಮಾಲೀಕರು ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಆದ್ಯತೆಯ ಸಾಲದ ಪಾಲುದಾರರಾಗಿರುವ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಇತರ ಪ್ರತಿಷ್ಠಿತ ಹಣಕಾಸು ತಂತ್ರಜ್ಞಾನ ಸಂಸ್ಥೆಗಳ ಸಹಭಾಗಿತ್ವದಲ್ಲಿ ಡಿಜಿಟಲ್ ಸೌಲಭ್ಯಗಳ ಮೂಲಕ ಕೇವಲ ಎರಡು ನಿಮಿಷಗಳಲ್ಲಿ ಶೂನ್ಯ ವೆಚ್ಚದಲ್ಲಿ ಸಾಲ ಪಡೆಯಬಹುದು. ಸಾಲದ ಮೊತ್ತವು ರೂ 5,000 ದಿಂದ ರೂ 2 ಲಕ್ಷದವರೆಗೆ 14 ದಿನಗಳವರೆಗೆ ಬಡ್ಡಿ ರಹಿತ ಸೌಲಭ್ಯದಲ್ಲಿ ದೊರೆಯಲಿದೆ. ಕಿರಾಣಿ ಅಂಗಡಿ ಮಾಲೀಕರು ನಗದು ಮತ್ತು ಆನ್‌ಲೈನ್ ಹಣ ವರ್ಗಾವಣೆಗಳ ಮೂಲಕ ಅನುಕೂಲಕರ ಮರುಪಾವತಿ ಆಯ್ಕೆಗಳ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ಸರಕುಗಳ ಖರೀದಿ ಆದೇಶ ರದ್ದುಪಡಿಸಿದ ಸಂದರ್ಭದಲ್ಲಿ ತಮ್ಮ ಕ್ರೆಡಿಟ್ ಬ್ಯಾಲನ್ಸ್ ಮತ್ತು ಬಿಲ್ಲುಗಳ ಮೇಲೆ ನಿರಂತರವಾಗಿ ನಿಗಾ ಇರಿಸಿ, ತ್ವರಿತ ಮರುಪಾವತಿ ಸೌಲಭ್ಯವನ್ನೂ ಕಿರಾಣಿ ಅಂಗಡಿ ಮಾಲೀಕರು ಪಡೆಯಬಹುದು.

**ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥರಾಗಿರುವ ಆದರ್ಶ್ ಮೆನನ್** ಅವರು ಈ ಬಗ್ಗೆ ಮಾತನಾಡಿ, 'ಕಿರಾಣಿ ಅಂಗಡಿಗಳು ಮತ್ತು ರಿಟೇಲ್ ವ್ಯಾಪಾರಿಗಳಿಗೆ ವಹಿವಾಟನ್ನು ಸುಲಭಗೊಳಿಸುವುದು ಮತ್ತು ಅವರ ವಹಿವಾಟಿನ ಬೆಳವಣಿಗೆಯ ಗತಿಯನ್ನು ಹೆಚ್ಚಿಸುವುದು ಫ್ಲಿಪ್‌ಕಾರ್ಟ್ ಹೋಲ್‌ಸೇಲ್‌ನ ಪ್ರಮುಖ ಗುರಿಯಾಗಿದೆ. ನಮ್ಮ ಹೊಸ ಸಾಲ ಯೋಜನೆಯು, ಭಾರತದಲ್ಲಿ ಕಿರಾಣಿ ಅಂಗಡಿ ಮಾಲೀಕರು ಎದುರಿಸುತ್ತಿರುವ ಸ್ಥಳೀಯ ಸವಾಲುಗಳನ್ನು ಪರಿಹರಿಸಲು ಮತ್ತು ಅವರ ನಗದು ಹರಿವು ನಿರ್ವಹಿಸಲು ಮತ್ತು ನಮ್ಮ

ಪ್ಲಾಟ್‌ಫಾರ್ಮ್‌ನಲ್ಲಿ ಅವರ ಖರೀದಿ ಅನುಭವ ಸುಧಾರಿಸಲು ಗಮನಾರ್ಹ ಬಗೆಯಲ್ಲಿ ಸಹಾಯ ಮಾಡುತ್ತದೆ ಎಂದು ನಾವು ದೃಢವಾಗಿ ನಂಬಿದ್ದೇವೆ. ಈ ಮೂಲಕ ಡಿಜಿಟಲೀಕರಣದ ಪ್ರಯೋಜನಗಳು ಬಿ2ಬಿ ರಿಟೇಲ್ ವಹಿವಾಟಿನ ವ್ಯವಸ್ಥೆಗೆ ಸಂಪೂರ್ಣವಾಗಿ ನೆರವಾಗಲಿರುವುದನ್ನು ಖಾತ್ರಿಪಡಿಸುತ್ತವೆ' ಎಂದು ಹೇಳಿದ್ದಾರೆ.

**ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ರಿಟೇಲ್ ಹೊಣೆಗಾರಿಕೆಗಳು ಮತ್ತು ಬ್ರ್ಯಾಂಚ್ ಬ್ಯಾಂಕಿಂಗ್‌ನ ಮುಖ್ಯಸ್ಥರಾಗಿರುವ ಅಮಿತ್ ಕುಮಾರ್** ಅವರು ಪ್ರತಿಕ್ರಿಯಿಸಿ, 'ಭಾರತದ ಕಿರಾಣಿ ಅಂಗಡಿಗಳು ದೇಶದ ರಿಟೇಲ್ ವ್ಯಾಪಾರದ ಮೂರನೇ ಎರಡರಷ್ಟು ಪಾಲನ್ನು ಹೊಂದಿವೆ. ಈ ಸಾಂಪ್ರದಾಯಿಕ ವ್ಯಾಪಾರವು ಈಗ ರಿಟೇಲ್‌ನ ಹೊಸ ಸ್ವರೂಪ ಮತ್ತು ವ್ಯಾಪಾರ ಮಾದರಿಗಳ ವಿಷಯದಲ್ಲಿ ಗಮನಾರ್ಹವಾಗಿ ಬದಲಾಗುತ್ತಿದೆ. 'ಡಿಜಿಟಲ್ ಮೊದಲು' ಧೋರಣೆ ಹೊಂದಿರುವ ಬ್ಯಾಂಕ್ ಆಗಿರುವ ಮತ್ತು ರಿಟೇಲ್ ವಹಿವಾಟಿಗೆ ಸೇವೆ ಒದಗಿಸಲು ಗಮನ ಕೇಂದ್ರೀಕರಿಸಿರುವ ಬ್ಯಾಂಕ್ ಆಗಿರುವ ನಾವು ಈ ವಲಯದ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಲು ಉತ್ಸುಕರಾಗಿದ್ದೇವೆ. ಫ್ಲಿಪ್‌ಕಾರ್ಟ್ ಜೊತೆಗಿನ ಸಹಭಾಗಿತ್ವವು ಕಿರಾಣಿ ಅಂಗಡಿ ಮಾಲೀಕರು ಔಪಚಾರಿಕ ಸಾಲ ಸೌಲಭ್ಯ ಪಡೆಯಲು ಮತ್ತು ವ್ಯಾಪಾರವನ್ನು ಹೆಚ್ಚಿಸಲು ನಮಗೆ ಅವಕಾಶ ಒದಗಿಸುತ್ತಿದೆ' ಎಂದು ಹೇಳಿದ್ದಾರೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ದೇಶದಾದ್ಯಂತ 15 ಲಕ್ಷಕ್ಕೂ ಹೆಚ್ಚಿನ ಸದಸ್ಯರಿಗೆ ಸೇವೆ ಸಲ್ಲಿಸುತ್ತಿದೆ. ಇದರಲ್ಲಿ ಕಿರಾಣಿ ಅಂಗಡಿಗಳು / ರಿಟೇಲ್ ವ್ಯಾಪಾರಿಗಳು, ಹೋರೆಕಾ (ಹೋಟೆಲ್, ರೆಸ್ಟೋರೆಂಟ್ ಮತ್ತು ಕೆಫೆಟೇರಿಯಾ) ಮತ್ತು ಒ&ಐ (ಕಚೇರಿಗಳು ಮತ್ತು ಸಂಸ್ಥೆಗಳು) ಸೇರಿವೆ.

ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಗ್ರಾಹಕರು ವ್ಯಾಪಕ ಶ್ರೇಣಿಯ ಫ್ಲಿಪ್‌ಕಾರ್ಟ್–ಖಾತರಿಯ ಗುಣಮಟ್ಟದ ಉತ್ಪನ್ನಗಳು, ಸರಳ ಮತ್ತು ಅನುಕೂಲಕರ ಆರ್ಡರ್ ರಿಟರ್ನ್‌ಗಳು ಮತ್ತು ತಮ್ಮ ಮಳಿಗೆಗಳಿಗೆ ತ್ವರಿತ ಉತ್ಪನ್ನಗಳ ವಿತರಣೆಯ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಖರೀದಿಸಿದ ಸರಕುಗಳ ಮೇಲೆ ಸುಲಭವಾಗಿ ನಿಗಾ ಇರಿಸುವ ಹಾಗೂ ಪ್ರತಿಯೊಂದೂ ಉತ್ಪನ್ನದ ಮೇಲೆ ಉತ್ತಮ ಲಾಭದ ಪ್ರಯೋಜನಗಳನ್ನು ಪಡೆದುಕೊಳ್ಳುತ್ತಾರೆ.

## ಫ್ಲಿಪ್ ಕಾರ್ಟ್ ಗ್ರೂಪ್ ಬಗ್ಗೆ

ಫ್ಲಿಪ್‌ಕಾರ್ಟ್ ಗ್ರೂಪ್, ಭಾರತದ ಪ್ರಮುಖ ಡಿಜಿಟಲ್ ವಾಣಿಜ್ಯ ಸಂಸ್ಥೆಗಳಲ್ಲಿ ಒಂದಾಗಿದೆ. ಗ್ರೂಪ್ ಕಂಪನಿಗಳಾದ ಫ್ಲಿಪ್‌ಕಾರ್ಟ್, ಮಿಂತ್ರಾ, ಫ್ಲಿಪ್‌ಕಾರ್ಟ್ ಹೋಲ್‌ಸೇಲ್ ಮತ್ತು ಕ್ಲಿಯರ್‌ಟ್ರಿಪ್ ಒಳಗೊಂಡಿದೆ. ಈ ಗ್ರೂಪ್ ಭಾರತದ ಪ್ರಮುಖ ಪಾವತಿ ಆ್ಯಪ್‌ಗಳಲ್ಲಿ ಒಂದಾಗಿರುವ ಫೋನ್‌ಪೇದಲ್ಲಿ ಗರಿಷ್ಠ ಷೇರುಗಳನ್ನು ಹೊಂದಿದೆ.

2007ರಲ್ಲಿ ಆರಂಭವಾಗಿರುವ ಫ್ಲಿಪ್‌ಕಾರ್ಟ್, ಲಕ್ಷಾಂತರ ಗ್ರಾಹಕರು, ಮಾರಾಟಗಾರರು, ವ್ಯಾಪಾರಿಗಳು ಮತ್ತು ಸಣ್ಣ ಉದ್ಯಮಗಳು ಭಾರತದ ಡಿಜಿಟಲ್ ವಾಣಿಜ್ಯ ಕ್ರಾಂತಿಯ ಭಾಗವಾಗಲು ಅನುವು ಮಾಡಿಕೊಟ್ಟಿದೆ. ನೋಂದಾಯಿತ ಗ್ರಾಹಕರ ಸಂಖ್ಯೆ 35 ಕೋಟಿಗಿಂತಲೂ ಹೆಚ್ಚಾಗಿದೆ. 80ಕ್ಕೂ ವಿಭಾಗಗಳಲ್ಲಿ 15 ಕೋಟಿ ಉತ್ಪನ್ನಗಳನ್ನು ನೀಡುತ್ತಿದೆ. ಭಾರತದಲ್ಲಿ ವಾಣಿಜ್ಯ ವಹಿವಾಟು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ಮಾಡಲು, ಎಲ್ಲರಿಗೂ ಅದು ಕೈಗೆಟುಕುವಂತೆ ಮಾಡಲು, ಗ್ರಾಹಕರನ್ನು ಸಂತೋಷಪಡಿಸಲು, ವಹಿವಾಟಿನ ವಲಯದಲ್ಲಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಉದ್ಯಮಿಗಳು ಮತ್ತು ಎಂಎಸ್‌ಎಂಇಗಳ ತಲೆಮಾರುಗಳನ್ನು ಸಬಲೀಕರಣಗೊಳಿಸುವ ನಮ್ಮ ಪ್ರಯತ್ನಗಳು ಫಲ ನೀಡಿವೆ. ಉದ್ಯಮಗಳಲ್ಲಿ ಅನೇಕ ಹೊಸತನಗಳನ್ನು ಮೊದಲ ಬಾರಿಗೆ ಪರಿಚಯಿಸುವುದಕ್ಕೂ ಇವೆಲ್ಲವು ನಮಗೆ ಪ್ರೇರಣೆ ನೀಡಿವೆ. ಸರಕು ಪೂರೈಸಿದ ನಂತರವೇ ನಗದು ಪಾವತಿ (ಕ್ಯಾಷ್ ಆನ್ ಡೆಲಿವರಿ), ಬಡ್ಡಿರಹಿತ ಸಮಾನ ಮಾಸಿಕ ಕಂತು ಪಾವತಿ ಸೌಲಭ್ಯ (ನೋ ಕಾಸ್ಟ್ ಇಎಂಐ) ಮತ್ತು ಸುಲಭ ರಿಟರ್ನ್ಸ್ ಸೌಲಭ್ಯಗಳನ್ನು ಮೊದಲ ಬಾರಿಗೆ ಪರಿಚಯಿಸಿರುವುದಕ್ಕೆ ಫ್ಲಿಪ್‌ಕಾರ್ಟ್ ಹೆಸರುವಾಸಿಯಾಗಿದೆ. ಗ್ರಾಹಕ ಕೇಂದ್ರಿತ ಆವಿಷ್ಕಾರಗಳು ಲಕ್ಷಾಂತರ ಭಾರತೀಯರಿಗೆ ಆನ್‌ಲೈನ್ ಶಾಪಿಂಗ್ ಅನ್ನು ಹೆಚ್ಚು ಸುಲಭವಾಗಿ ಮತ್ತು ಕೈಗೆಟುಕುವಂತೆ ಮಾಡಿದೆ. ತನ್ನ ಗ್ರೂಪ್ ಕಂಪನಿಗಳ ಜೊತೆಯಲ್ಲಿ, ಫ್ಲಿಪ್ ಕಾರ್ಟ್ ತಂತ್ರಜ್ಞಾನದ ಮೂಲಕ ಭಾರತದಲ್ಲಿ ವಾಣಿಜ್ಯ ವಹಿವಾಟನ್ನು ಪರಿವರ್ತಿಸಲು ಬದ್ಧವಾಗಿದೆ.

**ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಬಗ್ಗೆ**

ಹೆಸರಾಂತ ಮೂಲಸೌಕರ್ಯ ಹಣಕಾಸು ಸಂಸ್ಥೆ ಐಡಿಎಫ್‌ಸಿ ಲಿಮಿಟೆಡ್ ಮತ್ತು ಪ್ರಮುಖ ತಂತ್ರಜ್ಞಾನ ಎನ್‌ಬಿಎಫ್‌ಸಿ ಆಗಿದ್ದ ಕ್ಯಾಪಿಟಲ್ ಫಸ್ಟ್ ವಿಲೀನದಿಂದ 2018ರಲ್ಲಿ ಐಡಿಎಫ್‌ಸಿ ಫರ್ಸ್ಟ್ ಬ್ಯಾಂಕ್ ಸ್ಥಾಪಿಸಲಾಗಿದೆ. ಬ್ಯಾಂಕ್‌ನ ಬ್ಯಾಲನ್ಸ್‌ಶೀಟ್ ರೂ 1,68,000 ಕೋಟಿಗಿಂತಲೂ ಹೆಚ್ಚಿಗೆ ಇದೆ. ಬ್ಯಾಂಕ್‌ನ ಸಂಯೋಜಿತ ಇತಿಹಾಸದಲ್ಲಿ 3 ಕೋಟಿಗೂ ಹೆಚ್ಚಿನ ಸಾಲಗಳನ್ನು ಒದಗಿಸಲಾಗಿದೆ. ದೇಶದ ಉದ್ದಗಲದ 60,000ಕ್ಕೂ ಹೆಚ್ಚು ಹಳ್ಳಿ, ನಗರ ಮತ್ತು ಪಟ್ಟಣಗಳಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ಧ್ಯೇಯವು, ಮಹತ್ವಾಕಾಂಕ್ಷೆಯ ಭಾರತಕ್ಕೆ ಸೇವೆ ಸಲ್ಲಿಸುವುದು, ಮಾನವೀಯ ಮೌಲ್ಯಗಳಿಗೆ ಬದ್ಧವಾಗಿರುವುದು ಮತ್ತು ತಂತ್ರಜ್ಞಾನದಿಂದ ಪ್ರೇರಣೆ ಪಡೆದಿರುವುದರ ಜತೆಗೆ ಸಾಮಾಜಿಕ ಒಳಿತಿಗಾಗಿನ ಒಂದು ಶಕ್ತಿಯಾಗಿದೆ. ಲಕ್ಷಾಂತರ ಭಾರತೀಯರನ್ನು ಸಕಾರಾತ್ಮಕ ರೀತಿಯಲ್ಲಿ ತಲುಪುವುದು ಕೂಡ ಬ್ಯಾಂಕ್‌ನ ಮುಖ್ಯ ಉದ್ದೇಶವಾಗಿದೆ.

ಅಲ್ಪಾವಧಿಯಲ್ಲಿ ಬ್ಯಾಂಕ್, 601 ಶಾಖೆಗಳು, 161 ಸಂಪತ್ತು ಸೇವಾ ಕೇಂದ್ರಗಳು, 609 ಎಟಿಎಂಗಳು, 94 ರೀಸೈಕ್ಲರ್ಸ್‌ಗಳು ಮತ್ತು 623 ಗ್ರಾಮೀಣ ವ್ಯಾಪಾರ ಪ್ರತಿನಿಧಿ ಕೇಂದ್ರಗಳು, ಹೊಸ ತಲೆಮಾರಿನ ಅಂತರ್ಜಾಲ ಮತ್ತು ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಮತ್ತು 24/7 ಗ್ರಾಹಕ ಸೇವಾ ಸೇವೆಗಳ ಮೂಲಕ ತನ್ನ ವಹಿವಾಟನ್ನು ವ್ಯಾಪಕವಾಗಿ ವಿಸ್ತರಿಸಿದೆ. ಡಿಜಿಟಲ್ ವಿಧಾನದಲ್ಲಿ ದಿನೇ ದಿನೇ ಬೆಳವಣಿಗೆ ದಾಖಲಿಸುತ್ತಿದೆ. ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಗರಿಷ್ಠ ಗುಣಮಟ್ಟದ ಬ್ಯಾಂಕಿಂಗ್ ಸೌಲಭ್ಯವನ್ನು ಕೈಗೆಟುಕುವ ದರದಲ್ಲಿ ಭಾರತಕ್ಕೆ ತರಲು ಬದ್ಧವಾಗಿದೆ. ಬ್ಯಾಂಕ್ ತಂತ್ರಜ್ಞಾನ ಆಧಾರಿತ ಕಾರ್ಪೊರೇಟ್ ಬ್ಯಾಂಕಿಂಗ್ ಪರಿಹಾರಗಳನ್ನು ಸಹ ನೀಡುತ್ತದೆ.

**ಹೆಚ್ಚಿನ ಮಾಹಿತಿಗೆ, ದಯವಿಟ್ಟು** media@flipkart.com **ಗೆ ಬರೆಯಿರಿ**